(Karnataka Legislature Library)
ಕರ್ನಾಟಕ ರಾಜ್ಯ ಶಾಸನಸಭೆ
(ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4 ಡಿಸೆಂಬರ್ 478
ದಿನಾಂಕ Date.....



ಶ್ರೀಮತಿ ಚಂಪಾಬಾಯಿ ಭೋಗಲೆ.—ತಾಲ್ಲೂಕು ಅಭಿವೃದ್ಧಿ ಮಂಡಲಿ ನಿಷ್ಕರ್ಷ ಗವರ್ನಮೆಂಟಿನಲ್ಲಿ ಕಾಲು ಭಾಗ ಹಣ ಮಾನಲಿಚ್ಚಿದ್ದು ಲ್ಯಾಪ್ಸ್ ಆಗಿದೆ. ಹರಿಜನರನ್ನು ಉದ್ಧಾರ ಮಾಡುವ ರೀತಿಯೇ ಇದು ? ತಾಲ್ಲೂಕು ಬೋರ್ಡ್ ಎಷ್ಟುಮಟ್ಟಿಗೆ ಕೆಲಸಮಾಡುವುದು ಎಂಬುದು ಇದರಿಂದ ಗೊತ್ತಾಗುವುದಿಲ್ಲವೇ ?

† ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪುತ್ತೇನೆ. ತಾಲ್ಲೂಕು ಬೋರ್ಡ್ ಹರಿಜನ-ಗಿರಿಜನರಿಗಿಟ್ಟಿರುವ ಹಣವನ್ನು ಸರಿಯಾಗಿ ಖರ್ಚುಮಾಡದಿದ್ದರೆ ಖರ್ಚು ಮಾಡುವಂತೆ ತಿಳಿಸುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—1966ರಿಂದ ಇಲ್ಲಿಯವರೆಗೆ ಕಾಲು ಅಂಶ ಕೂಡ ಖರ್ಚುಮಾಡಿಲ್ಲ. 1962ರಲ್ಲಿ ಕೂಡ ಪ್ರಶ್ನೆ ಹಾಕಿದ್ದೆ, ಆ ಕಾಲದಲ್ಲೂ ಇದೇ ಪ್ರಕಾರ ಆಗಿದೆ. ಈ ಸಲವಾದರೂ ಲ್ಯಾಪ್ಸ್ ಆಗದಹಾಗೆ ನೋಡಿಕೊಳ್ಳುತ್ತೀರಾ ? ಈ ಹಣ ಮಾಸಲಾಗಿರುವುದೇಕೆ ? ಅದುದರಿಂದ ಕ್ರಮ ತೆಗೆದುಕೊಂಡು ಖರ್ಚುಮಾಡುವಂತೆ ನೋಡಿಕೊಳ್ಳುವಿರಾ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯಣಿಯರು ತಿಳಿಸಿದಹಾಗೆ ಪ್ರತಿಯೊಂದು ತಾಲ್ಲೂಕು ಬೋರ್ಡಿನ ಒಟ್ಟು ಆದಾಯದಲ್ಲಿ ನಾಲ್ಕನೇ ಒಂದು ಭಾಗ ಹರಿಜನ ಗಿರಿಜನರ ಯೋಗಕ್ಷೇಮಕ್ಕಾಗಿ ಮಾಸಲಾಗಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ಲಾನ್ಡ್ ಮತ್ತು ನಾನ್‌ಪ್ಲಾನ್ಡ್ ಸ್ಕೀಂಗಳಲ್ಲಿ ಏನು ರಾಭ ಬರುತ್ತದೆಯೋ ಅದರಲ್ಲಿ 18 ಪರ್ಸೆಂಟ್ ಕನಿಷ್ಠ ಪಕ್ಷ ಈ ಜನಗಳಿಗೆ ಮಾಸಲಾಗಿಡುವ ರೀತಿಯಲ್ಲಿ ಅವರಿಗೆ ಆದೇಶ ಕೊಟ್ಟಿದ್ದೇವೆ. ಕೆಲವು ತಾಲ್ಲೂಕು ಬೋರ್ಡಿನವರು ಹರಿಜನರ ಯೋಗಕ್ಷೇಮಕ್ಕಾಗಿ ಕೆಲವು ಪೊಟಲಗನ್ನು ಮಾಸಲಾಗಿಟ್ಟಿದ್ದಾರೆ ಆದರೆ ಅದು ಖರ್ಚಾಗಿಲ್ಲ ಎಂದು ಹೇಳಿದರು. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಹೋದ ಎರಡು ವರ್ಷದಲ್ಲಿ 8 ಲಕ್ಷಕ್ಕಿಂತ ಹೆಚ್ಚು ಖರ್ಚು ಮಾಡಿದ್ದಾರೆ. ಏನೇ ಆಗಲಿ ಮಾಸಲಾಗಿಟ್ಟಪ್ಪು ಹಣ ಖರ್ಚು ಮಾಡಬೇಕಾದ್ದು ನ್ಯಾಯ, ಆ ರೀತಿ ಖರ್ಚು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ, ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

## Construction of High Level causeway on Doddahalla in Puttaparthi Village

839. **Sri A MUNIYAPPA** (Bagepalli).—

Will the Minister for Public Works be pleased to state :—

(*a*) whether it has come to their notice that the agriculturists of Puttaparthi Village of Bagepalli Taluk are experiencing difficulty in transporting their agricultural implements as it is not possible for men and carts to travel on account of the Doddahalla on the road leading to the said Village ;

(*b*) whether it is a fact that the Minister has promised on the floor of the Assembly that a high level causeway would be constructed there ;

(*c*) if so, the reasons for not taking any action ?

**Sri BASAVARAJ MAGAVI** (Deputy Minister for Public Works).—

(*a*) Yes. Inconvenience is caused during rainy seasons only if there is floods.

(*b*) No.

(*c*) Does not arise in view of reply to clause (*b*) above.

ಶ್ರೀ ಎ. ಮುನಿಯಪ್ಪ.—ಪುಟ್ಟಪರ್ತಿ ಗ್ರಾಮಕ್ಕೆ ಮಳೆಗಾಲದಲ್ಲಿ ಅನಾನುಕೂಲವಾಗುತ್ತದೆ ಎಂದು ನೀವು ಹೇಳಿದ್ದೀರಿ. ಮಳೆಗಾಲ ಇದ್ದಾಗ್ಯೂ, ಇಲ್ಲದೇ ಇದ್ದಾಗ್ಯೂ, ಯಾವಾಗಲೂ ಅನಾನುಕೂಲವಾಗುತ್ತದೆ ಎಂದು ನಾನು ಪ್ರತಿಸಾರಿಯೂ ಹೇಳುತ್ತಾ ಇದ್ದೇನೆ, ನಿಮಗೆ ಕಾಣಿಕೆ ಬರಲಿಲ್ಲ. ಬಿ ಪ್ರಶ್ನೆಗೆ ನಿಜವಲ್ಲ ಎಂದು ಹೇಳಿದ್ದೀರಿ, ಹಿಂದಿನ ಮಂತ್ರಿಮಂಡಲದವರು ಇದಕ್ಕೆ 'ಹೈ ಲೆವಲ್ ಕಾನ್‌ವೇ ಮಾಡಿಸಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ನಿಜವಲ್ಲ ಎಂದು ಹೇಳುವಾಗ ಪ್ರೊಸೀಡಿಂಗ್ಸ್ ನೋಡಿ ಹೇಳುತ್ತೀರೋ ಅಥವಾ ನಿಮಗೆ ಇಷ್ಟಬಂದ ಹಾಗೆ ಹೇಳುತ್ತೀರೋ ?

†ಬಸವರಾಜ ಮಾಗಾವಿ.—ನನ್ನ ಹತ್ತಿರ ಪ್ರೊಸೀಡಿಂಗ್ಸ್ ಇದೆ. ಮಾನ್ಯ ಮುನಿಯಪ್ಪನವರು ಕೇಳಿದ ಪ್ರಶ್ನೆಗೆ ಅಲ್ಲಿ ರೋಡ್ ಕಮ್ಯೂನಿಕೇಷನ್ ಇಲ್ಲದೇ ಇರುವುದರಿಂದ ಅಲ್ಲಿ ಬ್ರಿಜ್ ಕಟ್ಟಿ ರಸ್ತೆ ಸಾರಿಗೆ ಅನುಕೂಲ ಮಾಡಲು ಏರ್ಪಾಡು ಮಾಡುತ್ತೀರಾ ಎಂದು ಕೇಳಿದ್ದರೆ, ಆಗಿನ ರೋಕೋಪ ಯೋಗಿ ಮಂತ್ರಿಗಳು, ಇದನ್ನು ಕಡಿಮೆ ಖರ್ಚಿನಲ್ಲಿ ಮಾಡುವುದಕ್ಕೆ ಸಾಧ್ಯವಿದ್ದರೆ ಪರಿಶೀಲನೆ ಮಾಡಿ ಅಂತ ಚೀಫ್ ಇಂಜನಿಯರಿಗೆ ಹೇಳುತ್ತೇನೆ, ಕಡಿಮೆ ಖರ್ಚಿನಲ್ಲಿ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬುದಾಗಿ ಹೇಳಿದ್ದಾರೆ.

ಶ್ರೀ ಎ. ಮುನಿಯಪ್ಪ.—ಪುಟ್ಟಪರ್ತಿ ಗ್ರಾಮದ ಜನಗಳಿಗೆ ಅನಾನುಕೂಲವಾಗಿರುವುದನ್ನು ತಪ್ಪಿಸಿ ಅನುಕೂಲ ಮಾಡುವುದಕ್ಕೆ ಈಗ ತಾವು ಏನು ಹೇಳುತ್ತೀರಿ ?

ಶ್ರೀ ಬಸವರಾಜ ಮಾಗಾವಿ.—ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಪ್ಲಾನ್ ಎಸ್ಟಿಮೇಟ್ ಮಾಡಿಸಿದ್ದಾಗಿದೆ, 75 ಸಾವಿರ ರೂಪಾಯಿ ಅಂದಾಜು ಮಾಡಿದ್ದಾರೆ, ಸ್ವಲ್ಪ ಹಣದ ಅನುಕೂಲವಾದ ತಕ್ಷಣ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಮೂರು ವರ್ಷದಿಂದ ಹಣ ಇಲ್ಲ ಎಂದು ಹೇಳುತ್ತಾ ಇದ್ದೀರಿ, ಇದು ಸರಿಹೋಗಬೇಕಾದರೆ ಇನ್ನೆಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಬಸವರಾಜ ಮಾಗಾವಿ.—3 ವರ್ಷದಿಂದ ಹಣ ಇಲ್ಲದೇ ಇರುವುದು ನಿಜ, ಆದರೆ ಏನಾದರೂ ಮಾಡಿ ಇದನ್ನು ಮಾಡಿಕೊಡಬೇಕೆಂಬ ವಿಷಯ ಕೂಡ ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟಿದ್ದಾರೆ, ಸ್ವಲ್ಪ ಹಣದ ಅನುಕೂಲತೆ ಆದ ತಕ್ಷಣ ಮಾಡುತ್ತೇವೆ.

## Development of Tourism in State

860. Smt.. NAGRATHNAMMA HIREMATH (Gandhinagara).—

Will the Minister for Transport be pleased to state :—

(*a*) the measures taken by Government to improve Toursim in the State ;

(*b*) whether Government would take a decision to almalgamate Tourism and Information Department ;

(*c*) whether they have contemplated to take any action to constitute a Committee consisting of non-officials and officials concerned to advise Government and to extend co-operation on measures to be undertaken to develop Tourism ?

Sri MOHAMED ALI (Minister for Transport).—

(*a*) The State Government has taken the following steps to improve and also to give a fillip to the development of tourism in the State :—

1. Construction of Tourist Homes in places of tourist importance and in some places canteens ;